ಶ್ರೀ ಜಗದೀಶ್ ಶೆಟ್ಟರ್: ಅಧಿಕಾರಿಗಳು ಎಲ್ಲಾ ಗ್ರಾಮ ಪಂಚಾಯ್ತಿಗಳಿಗೂ ಹೋಗಿ ಅಂಕಿ ಅಂಶ ತರುವುದಿಲ್ಲ. ಜಿಲ್ಲಾ ಪಂಚಾಯ್ತಿಗಳವರು, ಎಲ್ಲಾ ಗ್ರಾಮ ಪಂಚಾಯ್ತಿಗಳ ಮಾಹಿತಿಯನ್ನು ತರಿಸಿಟ್ಟುಕೊಳ್ಳಬೇಕು. ಗಣಕೀಕರಣ, ಮಾಹಿತಿ ತಂತ್ರಜ್ಞಾನ ಈ ವಿಚಾರಗಳನ್ನು ಸುಮ್ಮನೇ ಮಾತನಾಡಬೇಕಷ್ಟೆ.

ಅಧ್ಯಕ್ಷರು: ಆಯಿತು, ಒಂದು ವಾರದಲ್ಲಿ ಉತ್ತರ ತರಿಸಿ.

ಬೆಂಗಳೂರು ನಗರದ ಆಸ್ಪತ್ರೆಗಳಲ್ಲಿ ಮರಣೋತ್ತರ ಶವ ಪರೀಕ್ಷೆ

206(2028)

ಶ್ರೀ ಸುರೇಶ್ ಕುಮಾರ್ ಎಸ್.(ರಾಜಾಜಿನಗರ): ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಯಾವ ಯಾವ ಆಸ್ಪತ್ರೆಗಳಲ್ಲಿ ಮರಣೋತ್ತರ ಶವ ಪರೀಕ್ಷೆಯನ್ನು ನಡೆಸಲಾಗುತ್ತಿದೆ?

ಆ) ಮರಣೋತ್ತರ ಶವ ಪರೀಕ್ಷೆಗಾಗಿ ಬಂದಿರುವ ಶವಗಳನ್ನು ಸೂಕ್ತ ರೀತಿಯಿಂದ ಇಡಲು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತೊಡಕುಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀಮತಿ ನಫೀಸಾ ಫಜಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):

ಅ) ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ ಮತ್ತು ವಿಕ್ಟೋರಿಯಾ ಆಸ್ಪತ್ರೆ.

ಆ) ಈಗಾಗಲೇ ಹದಿನೈದು ಶವಗಳನ್ನು ಸೂಕ್ತ ರೀತಿಯಲ್ಲಿ ಶೈತ್ಯಾಗಾರದಲ್ಲಿ ಇಡಲು ಆಸ್ಪದವಿದ್ದು ಇನ್ನೂ ಹೆಚ್ಚಿನ ಶವಗಳನ್ನು ಶೈತ್ಯಾಗಾರದಲ್ಲಿ ಇಡಲು ಕಟ್ಟಡದ ನಿರ್ಮಾಣ ಕಾರ್ಯ ನಡೆಯುತ್ತಿದೆ.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೇ, ಈ ಉತ್ತರವನ್ನು ನೋಡಿದರೆ, the answer requires post-mortem. ನಾನು ಪೋಸ್ಟ್ ಮಾರ್ಟಮ್ ಸೆಂಟರ್ಸ್ ಬಗ್ಗೆ ಕೇಳಿದ್ದೇನೆ. ಬೆಂಗಳೂರು ನಗರದಲ್ಲಿ ಯಾವ ಯಾವ ಆಸ್ಪತ್ರೆಗಳಲ್ಲಿ ಮರಣೋತ್ತರ ಶವ ಪರೀಕ್ಷೆಯನ್ನು ನಡೆಸಲಾಗುತ್ತದೆ ಎಂದು ಕೇಳಿರುವುದಕ್ಕೆ ಅವರು ಉತ್ತರ ಕೊಟ್ಟಿದ್ದಾರೆ. ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ ಮತ್ತು ವಿಕ್ಟೋರಿಯಾ

ಆಸ್ಪತ್ರೆ ಎಂದು ಹೇಳಿದ್ದಾರೆ. ಹಾಗಾದರೆ ಸೆಂಟ್ ಜಾನ್ ಆಸ್ಪತ್ರೆಯಲ್ಲಿ ಮಾಡುವುದಿಲ್ಲವೇ? ಎಂ.ಎಸ್.ರಾಮಯ್ಯ ಆಸ್ಪತ್ರೆಯಲ್ಲಿ ಮಾಡುವುದಿಲ್ಲವೇ? ಸರ್ಕಾರಕ್ಕೆ ಇದರ ಬಗ್ಗೆ ಪರಿಜ್ಞಾನ ಇಲ್ಲವೆ ಅಥವಾ ಇದು ಬೇಜವಾಬ್ದಾರಿ ಉತ್ತರವೇ? ಇದು ನನಗೆ ಅರ್ಥವಾಗುತ್ತಾ ಇಲ್ಲ. ಬೆಂಗಳೂರಿನಲ್ಲಿ ಯಾವುದಾದರೂ ನರಕ ಎಂಬ ಜಾಗವಿದ್ದರೆ, ಆ ಪೋಸ್ಟ್ ಮಾರ್ಟಮ್ ಸೆಂಟರ್ಸ್. ಆ ಆಸ್ಪತ್ರೆಗಳಲ್ಲಿ ನಡೆಯತಕ್ಕ ಭ್ರಷ್ಟಾಚಾರವನ್ನು ನಿಲ್ಲಿಸಬೇಕು. ಸತ್ತಿರುವ ಹೆಣಗಳ ತಿರಸ್ಕಾರವನ್ನು ಮಾಡದಂತೆ ನೋಡಿಕೊಳ್ಳಬೇಕು. ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದು, ತಾವು ನಗರ ಪ್ರದಕ್ಷಿಣೆ ಮಾಡುತ್ತಿದ್ದೀರಿ, ಅದು ಬಹಳ ಒಳ್ಳೆಯ ಕೆಲಸ. ತಾವು ನಗರ ಪ್ರದಕ್ಷಿಣೆ ಮಾಡುಮಾಗ ಈ ಪೋಸ್ಟ್ ಮಾರ್ಟಮ್ ಸೆಂಟರ್ಸ್‌ಗೂ ಹೋಗಬೇಕು. ಅಲ್ಲಿ ಆ ಬಂಧುಗಳ ಅಳಲನ್ನು ಮತ್ತು ಅವರಿಂದ ಹಣ ಕೀಳುವುದನ್ನು ತಾವು ನೋಡಬೇಕು. ಅಲ್ಲಿ ನರಕಸದೃಶವಾದ ವಾತಾವರಣವಿದೆ. ನಾನು ಸನ್ಮಾನ್ಯ ಸಚಿವರನ್ನು ಕೇಳಿಕೊಳ್ಳುವುದು, ಅಲ್ಲಿಯ ಲಂಚ, ಅಲ್ಲಿಯ ಬೇಜವಾಬ್ದಾರಿ, ಅಲ್ಲಿ ಹಿಂಸೆ ಕೊಡುವ ಜನರನ್ನು ತಡೆಯುವುದಕ್ಕೆ ನೀವೇನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀಮತಿ ನಫೀಸಾ ಫಜಲ್: ಮಾನ್ಯ ಅಧ್ಯಕ್ಷರೇ, ನಾವು ಹೆಚ್ಚು ಕ್ರಮ ತೆಗೆದುಕೊಂಡಿದ್ದೇವೆ. ಮಾನ್ಯ ಸುರೇಶ್ ಕುಮಾರ್‌ರವರು ಬೇರೆ ಬಿ.ಜೆ.ಪಿ. ಸದಸ್ಯರ ಜೊತೆ ಬೇರೆ ಬೇರೆ ಆಸ್ಪತ್ರೆಗಳಿಗೆ ಹೋಗಿ, ಎಲ್ಲಾ ಪರಿಶೀಲನೆ ಮಾಡಿರುವುದು ನಮ್ಮ ಗಮನಕ್ಕೂ ಬಂದಿದೆ. ಸರ್ಕಾರದಿಂದ ಎಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಒಂದು ಡೆಸ್ಕ್ ಹಾಕಿ, ಇಬ್ಬರು ನರ್ಸ್‌ಗಳನ್ನು ದಿನದ 24 ಗಂಟೆಯೂ ಕರ್ತವ್ಯದ ಮೇಲಿದ್ದು, ದೂರುಗಳನ್ನು ತೆಗೆದುಕೊಳ್ಳುವುದಕ್ಕೆ ಇಟ್ಟಿದ್ದೇವೆ. ಆಮೇಲೆ, ಅವರು ಲಂಚ ತೆಗೆದುಕೊಳ್ಳುತ್ತಾರೆಂದು ಹೇಳಿದರು. ಬಹಳ ವರ್ಷಗಳಿಂದ ಈ ಲಂಚ ತೆಗೆದುಕೊಳ್ಳುತ್ತಿರುವುದನ್ನು ತಡೆಯುವುದಕ್ಕೆ ನಾವು ಈ ತರಹದ ವ್ಯವಸ್ಥೆ ಮಾಡಿದ್ದೇವೆ. ನಾನು ಕೇವಲ ಸರ್ಕಾರಿ ಆಸ್ಪತ್ರೆಯ ಬಗ್ಗೆ ಉತ್ತರವನ್ನು ಕೊಟ್ಟಿದ್ದೇನೆ.

ಶ್ರೀ ಎಸ್.ಸುರೇಶ್ ಕುಮಾರ್: ನನ್ನ ಪ್ರಶ್ನೆ ಕ್ಲಿಯರ್ ಆಗಿದೆ. ನಾನು ಇಂಗ್ಲೀಷ್‌ನಲ್ಲಿ ಓದುತ್ತೇನೆ.

"In which hospitals of Bangalore city, post mortem examination is being done?"

I have not asked about the Government hospitals. They are recognised post mortem centres. ಸರ್ಕಾರಕ್ಕೆ ಇದರ ಬಗ್ಗೆಯೂ ಅರಿವಿಲ್ಲದಿದ್ದರೆ ಹೇಗೆ? ಹಾಗಾದರೆ ಅಲ್ಲಿ ಪೋಸ್ಟ್ ಮಾರ್ಟಮ್

ನಡೆಯುತ್ತಿರುವುದು ಇರ್ರೆಗ್ಯುಲರ್ರಾ? ಇಲ್ಲೀಗಲ್ಲಾ?

ಶ್ರೀಮತಿ ನಫಿಸಾ ಫಜಲ್: ನಾವು ಈ ರೀತಿ ಉತ್ತರ ಏಕೆ ಕೊಟ್ಟಿದ್ದೇವೆಂದರೆ, ನಿಮಾನ್ಸ್‌ನಲ್ಲಿ ಮೂವತ್ತು ಶವಗಳನ್ನು ಶೈತ್ಯಾಗಾರದಲ್ಲಿಡಲು ಅವಕಾಶವಿದೆ. But NIMHANS take their own hospital cases. They do not take public cases. Even St.John Hospital, they take their own hospital cases. They do not take any Government cases. Rest like Ambedkar, Ramaiah and Kempegowda hospitals, they take other cases also, you are right about that.

ಶ್ರೀ ಎಸ್.ಸುರೇಶ್ ಕುಮಾರ್: ಅಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಅವರು ಒಪ್ಪಿಕೊಂಡಿದ್ದಾರೆ. ಪೋಲೀಸ್ ಕೇಸಾಗಿ ಶವಗಳೇನು ಹೋಗುತ್ತವೆ ಅದಕ್ಕೆ ಐಸ್ ಅನ್ನು ಅವರೇ ತರಬೇಕೆಂದು ಹೇಳುತ್ತಾರೆ. ಸತ್ತು ಹೋಗಿರುವ ಮನೆಯವರು ಬಹಳ ದುಃಖದಿಂದಿರುತ್ತಾರೆ, ಅವರು ಎಲ್ಲಿಂದ ಐಸ್ ಅನ್ನು ತರಬೇಕು? ಆ ಐಸ್ ಪ್ರೊಕ್ಯೂರ್ ಮಾಡಲು ಈ ಪಿ.ಎಂ. ಸೆಂಟರ್‌ನಲ್ಲಿ ಅವಕಾಶವಿಲ್ಲ. ಪೊಲೀಸ್‌ನವರು ಎಲ್ಲಿಂದ ಐಸ್ ಅನ್ನು ತರುತ್ತಾರೆ? ಹೆಣವನ್ನು ಸುತ್ತಲು ಬಟ್ಟೆ ತರಬೇಕು, ಅದನ್ನು ಅವರು ಎಲ್ಲಿಂದ ತರಬೇಕು? ಅವರು ಉತ್ತರದಲ್ಲಿ ಇನ್ನೂ ಹೆಚ್ಚಿನ ಶವಗಳನ್ನು ಶೈತ್ಯಾಗಾರದಲ್ಲಿಡಲು ಕಟ್ಟಡದ ಕೆಲಸ ನಡೆಯುತ್ತಿದೆಯೆಂದು ಹೇಳಿದ್ದಾರೆ. ಇಲ್ಲಿರುವುದು ಕಟ್ಟಡದ ಅಭಾವವಲ್ಲ. ಇಲ್ಲಿ ಮನಷ್ಯತ್ವದ ಅಭಾವವಿದೆ. ನಾವುಗಳು ಶವಾಗಾರಕ್ಕೆ ಹೋಗಿದ್ದೆವು, ಕಳೆದ 36 ಗಂಟೆಗಳಿಂದ ಅನಾಥ ಶವವು ಶವಾಗಾರದಲ್ಲಿ ಇತ್ತು. ನಾವು ವೈದ್ಯರನ್ನು ಭೇಟಿ ಮಾಡಿ ಕೇಳಿದೆವು, ಬೆಳಿಗ್ಗೆ 11 ಗಂಟೆಗೇ ಆ ವ್ಯಕ್ತಿ ಮದ್ಯ ಸೇವನೆ ಮಾಡಿಬಿಟ್ಟಿದ್ದರು. ನಾನು ಅವರ ಹೆಸರನ್ನು ಹೇಳಲು ಬಯಸುವುದಿಲ್ಲ. ಸಾಮಾನ್ಯವಾಗಿ ಕುಡಿದಿರುವವರು ಸತ್ಯವನ್ನು ಹೇಳುತ್ತಾರೆ ಎಂಬಂತೆ ಆ ವೈದ್ಯರು ನಮ್ಮಲ್ಲಿ ಐಸ್ ಅನ್ನು ಪ್ರೊಕ್ಯೂರ್ ಮಾಡಲು ಅವಕಾಶವಿಲ್ಲವೆಂದು ಸತ್ಯವನ್ನು ಹೇಳಿದರು. ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಶವಾಗಾರದಲ್ಲಿ ಐಸ್ ಅನ್ನು ಬಟ್ಟೆಯನ್ನು ಪ್ರೊಕ್ಯೂರ್ ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ? ಶವಾಗಾರದಲ್ಲಿರುವ ಸಿಬ್ಬಂದಿ ಇವತ್ತು ಸೂಯಸೈಡ್, ಮರ್ಡರ್ ಅಪಘಾತದಿಂದ ಶವಗಳು ಬರಲಿ ನಮಗೆ ಆದಾಯ ಬರುತ್ತದೆಂದು ಊದಿನಕಡ್ಡಿಯನ್ನು ಹಚ್ಚುತ್ತಾರೆ. ಇದನ್ನು ತಡೆಗಟ್ಟಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ?

Smt.Nafees Fazal:- ಮಾನ್ಯ ಸದಸ್ಯರು ಅನ್‌ಕ್ಲೈಮ್ಡ್ ಬಾಡಿಗಳ ಬಗ್ಗೆ ಹೇಳುತ್ತಿದ್ದಾರೆ. Everybody knows that unless and until the

police does inquest, Doctors are not allowed to touch the bodies. That is why, the Police has to provide for the ice. I have also made enquiries when it was brought to my notice. Because of this one point, till inquest is over, body is not handed over to the hospital authorities and unless and until it is handed over, Doctors cannot conduct post mortem. This is the main reason.

Sri Suresh Kumar:- Who should secure those bodies?

ಶ್ರೀಮತಿ ನಫೀಸಾ ಫಜಲ್: ಅದನ್ನೇ ನಾನು ಹೇಳಿದ್ದು. It is the responsibility of the police to procure ice. It is not the duty of the hospital.

ಶ್ರೀ ಎಸ್.ಸುರೇಶ್‌ಕುಮಾರ್: ಸತ್ತಮೇಲೂ ಆ ಹೆಣಗಳು ಅನಾಥವಾಗಿರಬೇಕೇ? ಅನ್‌ಕ್ಲೈಮ್ಡ್ ಬಾಡೀಸ್‌ನ್ನು ಪೊಲೀಸ್‌ನವರು ಅಲ್ಲಿಗೆ ತಂದು ಹಾಕುತ್ತಾರೆ. ಆ ರೀತಿ ಹಾಕಿದಾಗ who should secure those bodies?

Smt.Nafees Fazal:- It is one police who are looking around the hospital.

ಶ್ರೀ ಎಸ್.ಸುರೇಶ್ ಕುಮಾರ್: ಪೋಲೀಸ್ ಕೂಡ it is another organ of the Government. ಇದಕ್ಕೆ ಯಾರು ಉತ್ತರ ಕೊಡುತ್ತಾರೆ?

ಶ್ರೀಮತಿ ನಫಿಸಾ ಫಜಲ್: ಪೋಲೀಸ್‌ನವರು ಅನ್‌ಕ್ಲೈಮ್ಡ್ ಬಾಡೀಸ್‌ನ್ನು ಆಸ್ಪತ್ರೆಗೆ ತೆಗೆದುಕೊಂಡು ಬರುತ್ತಾರೆ. There is provision only in Bowring and Victoria Hospitals, being Government hospitals. When the police brings bodies everybody knows the rule is, no doctor can touch till police inquest is over. Then what are the Doctors supposed to do...

SRI SURESH KUMAR:- It is the question of filing F.I.R. ಎಫ್. ಐ. ಆರ್. ನ್ನು ಹಾಕುತ್ತಾರೆ, ಬಾಡಿ ಒಂದು ಸಲ ಶವಾಗಾರಕ್ಕೆ ಬಂದಮೇಲೆ ಪೋಸ್ಟ್‌ಮಾರ್ಟಮ್ ಮಾಡುವವರೆಗೆ ಅದು ಯಾವ ಸ್ಥಿತಿಯಲ್ಲಿರಬೇಕು ಎಂಬುದು ನನ್ನ ಪ್ರಶ್ನೆ. ಬಂದವರಿಗೆಲ್ಲಾ ಅದು ಗಾಬರಿ, ಅಸಹ್ಯ, ಭಯವನ್ನು ಹುಟ್ಟಿಸುವ

ರೀತಿಯಲ್ಲಿ ಇರಬೇಕೇ?

Smt. Nafees Fazal:- There is a Govt. Order which says that the bodies, unclaimed for more than two days, the hospitals should conduct formalities and dispose of the bodies.

ಶ್ರೀ ಪಿ.ಚನ್ನಿಗಪ್ಪ: ಮಾನ್ಯ ಅಧ್ಯಕ್ಷರೆ, ಇದರಲ್ಲಿ ನಾಗರೀಕತೆಯ ಪ್ರಶ್ನೆ ಅಡಗಿದೆ, ಯಾವುದೇ ಶವ ಇರಬಹುದು ಅದಕ್ಕೆ ಗೌರವ ಕೊಡಬೇಕಾಗುತ್ತದೆ. ಮನುಷ್ಯ ಹುಟ್ಟಿದಾಗ ನಾಮಕರಣ ಮಾಡುತ್ತಾರೆ, ಮಧ್ಯದಲ್ಲಿ ಮದುವೆ ಮಾಡುತ್ತಾರೆ, ಸಾಯುವಾಗ ಗೌರವ ಸಲ್ಲಿಸುತ್ತಾರೆ. ಆ ಮೂರಕ್ಕೆ ಮಾತ್ರ ಮನುಷ್ಯ ಹುಟ್ಟಿರುತ್ತಾನೆ. ಆದ್ದರಿಂದ ಅದು ಯಾವುದೇ ಶವವಿರಲಿ ಶವಾಗಾರದಲ್ಲಿ ಗೌರವವನ್ನು ಕೊಡಬೇಕು. ಪಿ.ಎಂ. ಆದ ಮೇಲೆ ಶವಕ್ಕೆ ಬಟ್ಟೆಕಟ್ಟುವುದು ಇರಬಹುದು, ಮತ್ತೊಂದು ಇರಬಹುದು, ಶವವು ವಾಸನೆ ಬರದಂತೆ ಕೆಮಿಕಲ್ಸ್‌ನ್ನು ಹಾಕಿ ಇಡುವಂಥ ಕೆಲಸವನ್ನು ಸರ್ಕಾರದ ವತಿಯಿಂದ ಮಾಡಿಸಿದರೆ ಒಳ್ಳೆಯದು. ಇಲ್ಲದಿದ್ದರೆ ಜನರಿಗೂ ಅಸಹ್ಯವಾಗಿ ಕಾಣುತ್ತದೆ. ಈ ಕೆಲಸ ಮಾಡುವಲ್ಲಿ ಸರ್ಕಾರ ಹಿಂದೆ ಬಿದ್ದಿದೆ. ಆದ್ದರಿಂದ ಪ್ರತಿಯೊಂದು ಆಸ್ಪತ್ರೆಯಲ್ಲೂ ಶವಾಗಾರವನ್ನು ಸ್ವಚ್ಚ ಮತ್ತು ಸುಸಜ್ಜಿತವಾಗಿಟ್ಟರಬೇಕು, ನಾಗರೀಕವಾಗಿರಬೇಕು, ನೋಡುವ ಜನರಿಗೆ ಪರವಾಗಿಲ್ಲ ಸರ್ಕಾರ ಕೆಲಸ ಮಾಡುತ್ತಿದೆ ಎಂಬಂತಿರಬೇಕು. ಇದಕ್ಕೆ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳುತ್ತೇನೆ.

Smt. Nafees Fazal: We have four cold storage cabinets. In Victoria hospital, at a given time, we are storing 15 bodies and in Bowring, we can store 12 bodies. They are only talking about unclaimed decomposed bodies. The Government is fully equipped to store them. Victoria Hospital conducts 15 post mortem and Bowring conducts 2 or 3. So, We are fully equipped for emergencies. ವಿಕ್ಟೋರಿಯಾ ಆಸ್ಪತ್ರೆಯಲ್ಲಿ 15, ಬೌರಿಂಗ್ ಆಸ್ಪತ್ರೆಯಲ್ಲಿ ದಿನಕ್ಕೆ ಮೂರರಿಂದ ನಾಲ್ಕು ಪೋಸ್ಟ್ ಮಾರ್ಟಮ್‌ನ್ನು ಮಾಡುತ್ತಾರೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೆ, ನಾನೂ ಸುರೇಶ್ ಕುಮಾರ್‌ರವರು ವಿಕ್ಟೋರಿಯಾ ಆಸ್ಪತ್ರೆಯ ಶೈತ್ಯಾಗಾರಕ್ಕೆ ಭೇಟಿ ನೀಡಿದಾಗ ಅಲ್ಲಿರುವ

ಶೃತ್ಯಾಗಾರವು ಕಳೆದ ಹತ್ತು ವರ್ಷಗಳಿಂದ ಕೆಲಸ ಮಾಡುತ್ತಿಲ್ಲವೆಂದು ವೈದ್ಯರು ಹೇಳಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎರಡನೆಯದಾಗಿ, ಈ ಪಿ.ಎಂ. ಕೇಂದ್ರದ ನಿರ್ವಹಣೆಗೆ ಎಷ್ಟು ಹಣವನ್ನು ಮೀಸಲಾಗಿ ಇಟ್ಟಿದ್ದೀರಿ? ಅದು ಸರಿಯಾಗಿ ಏನಿಯೋಗವಾಗುತ್ತಿದೆಯೇ? ಪೋಲೀಸರು ಐಸ್ ಅನ್ನು ತರಬೇಕಾದರೆ ಪೋಲೀಸ್ ಇಲಾಖೆಯವರು ಅದಕ್ಕಾಗಿ ಹಣವನ್ನೇನಾದರೂ ಮೀಸಲು ಇಟ್ಟಿದ್ದಾರೆಯೇ? ಪೋಸ್ಟ್ ಮಾರ್ಟಮ್ ಕೇಂದ್ರದಲ್ಲಿ ಶವವನ್ನು ಪೋಸ್ಟ್‌ಮಾರ್ಟಮ್ ಮಾಡಲು ಒಂದು ಸಾವಿರ ಲಂಚ ಕೊಡಬೇಕಾಗುತ್ತದೆಂದು ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ತಮಗೂ ಇದರ ಬಗ್ಗೆ ಮಾಹಿತಿಯನ್ನು ಕಳುಹಿಸಿಕೊಟ್ಟಿದ್ದೇನೆ. ಜರೂರಾಗಿ ಪೋಸ್ಟ್ ಮಾರ್ಟಮ್ ಮಾಡಬೇಕಾಗಿದ್ದರೆ ಪೋಲೀಸ್‌ನವರು ಮತ್ತು ವೈದ್ಯರಿಗೆ ಐದುನೂರು ರೂಪಾಯಿ ಲಂಚ ಕೊಡಬೇಕಾಗುತ್ತದೆ. ಇದೆಲ್ಲಾ ಸರ್ಕಾರದ ಗಮನಕ್ಕೆ ಬಂದಿದೆಯೇ?

ಅಧ್ಯಕ್ಷರು: ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಅದನ್ನೆಲ್ಲಾ ಪರಿಶೀಲನೆ ಮಾಡಿ ಮಾನ್ಯ ಸಚಿವರೇ ಲಂಚ ಕೊಡುವ ವಿಚಾರದ ಬಗ್ಗೆ ಪರಿಶೀಲನೆ ಮಾಡಿ.

ಶ್ರೀಮತಿ ನಫೀಸಾ ಫಜಲ್: ಅದರ ಬಗ್ಗೆ ಪರಿಶೀಲನೆ ಮಾಡಿದ್ದೇವೆ. ನಾವು ನಾಲ್ಕು ಜನ ಅಧಿಕಾರಿಗಳನ್ನು ಹಾಕಿದ ಮೇಲೆ ಇದರ ಬಗ್ಗೆ ಯಾವುದೇ ದೂರು ಬಂದಿಲ್ಲ.

ಶ್ರೀ ಎಸ್.ಸುರೇಶ್‌ಕುಮಾರ್: ಅಲ್ಲಿ ಹೇಗೆ ಮಾಡಿದ್ದಾರೆ ಎಂಬುದನ್ನು ನೋಡಲು ನಾವು ಒಂದು ಸಲ ಹಣವಾಗಿ ಹೋಗಬೇಕಷ್ಟೆ.

ಅಧ್ಯಕ್ಷರು: ಅವರುಗಳು ಏನೇನು ಹೇಳುತ್ತಿದ್ದಾರೆ ಅದರ ಬಗ್ಗೆ ದಯಮಾಡಿ ಮಾನ್ಯ ಸಚಿವರು ಪರಿಶೀಲನೆ ಮಾಡಿ.

ಶ್ರೀಮತಿ ನಫೀಸಾ ಫಜಲ್: ಅದನ್ನು ಸರಿಪಡಿಸಿಯಾಗಿದೆಯೆಂದು ಹೇಳಿದ್ದೇನೆ. ಮಾನ್ಯ ಸದಸ್ಯರಿಗೆ ಅರ್ಥವೇ ಆಗುತ್ತಿಲ್ಲ.

ಅಧ್ಯಕ್ಷರು: ಮತ್ತೊಮ್ಮೆ ಪರಿಶೀಲನೆ ಮಾಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯ ಮಂತ್ರಿಗಳ ಗಮನ ಸೆಳೆದು ಅವರಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತಿದ್ದೇನೆ. ಮೆಡಿಕಲ್ ಎಜ್ಯುಕೇಷನ್ ಮುಖ್ಯಮಂತ್ರಿಗಳ ಖಾತೆಗೇ ಬರುತ್ತದೆ. ಇದರಲ್ಲಿ ಐವತ್ತು ಪರ್‌ಸೆಂಟ್ ಕೇಸಸ್‌ಗಳು ಮೆಡಿಕೋ ಲೀಗಲ್ ಕೇಸಸ್. ಏಕ್ಸೋರಿಯ, ಬೌರಿಂಗ್ ಆಸ್ಪತ್ರೆಗಳು ಇರಬಹುದು, ಪಿ.ಎಂ. ಅನ್ನು ಆದಷ್ಟು ಬೇಗ ಮಾಡಿಕೊಡಬೇಕೆಂದು ಪೋಲೀಸ್ ಸ್ಟೇಷನ್‌ಗಳನ್ನು ಅಟ್ಯಾಚ್ ಮಾಡಿದ್ದೇವೆ. ಆ ರೀತಿ ಅಟ್ಯಾಚ್ ಮಾಡಿದರೂ

ಸತ್ತ ತಕ್ಷಣ ಎಂ.ಎಲ್.ಎ. ಸಚಿವರುಗಳು ಅನೇಕ ಸಲ ಜರೂರಾಗಿ ಪಿ.ಎಂ. ಮಾಡಿಸಿಕೊಡಿ ಎಂದು ಎಲ್ಲಾ ಕಡೆಗಳಿಂದ ದೂರವಾಣಿ ಮಾಡುತ್ತಾರೆ. ಕೂಡಲೇ ಪಿ.ಎಂ. ಮಾಡಿಸಿಕೊಡಿ ಎಂದು ನಮಗೆ ಫೋನ್ ಮಾಡುತ್ತಾರೆ. ಮಂಡ್ಯ, ಕೋಲಾರ, ತುಮಕೂರು ಮುಂತಾಗಿ ಎಲ್ಲಾ ಕಡೆಗಳಿಂದಲೂ ಕೂಡ ಜನರು ಪ್ರತಿನಿಧಿಗಳಿಗೆ ಕೇಳಿಕೊಳ್ಳುತ್ತಾರೆ. ಮಾನ್ಯ ಸುರೇಶ್ ಕುಮಾರ್‌ರವರು ಏನು ಹೇಳಿದ್ದಾರೆ, ವಸ್ತುಸ್ಥಿತಿಯಲ್ಲಿ ಅದು ಐಸ್ ವಿಚಾರವಾಗಲೀ, ಬಟ್ಟೆ ವಿಚಾರವಾಗಲಿ, ಇದ್ದೇ ಇದೆ. ಅದೊಂದು ಭಾಗ ಪ್ರಮುಖವಾದುದು. ಇಲ್ಲಿ ಬಹಳ ಮುಖ್ಯವಾಗಿರತಕ್ಕಂಥ ವಿಚಾರವೊಂದು ಇದೆ. ಅದು ಮರ್ಡರ್ ಆಗಿದ್ದರೆ ಕೋರ್ಟ್ ಮುಂದೆ ಹೋಗಿ ಅಥವಾ ಬೇರೆ ಇನ್ನೇನಾದರೂ ಆಗಿದ್ದರೆ, ಫೊರೆನ್ಸಿಕ್ ಡಿಪಾರ್ಟ್‌ಮೆಂಟ್‌ನ ರಿಪೋರ್ಟ್ ಎನ್ನುವುದು ಬಹಳ ಮುಖ್ಯವಾದುದು. ಇದನ್ನು ಪಿ.ಎಂ. ಮಾಡತಕ್ಕಂಥ ಸಂದರ್ಭದಲ್ಲಿ ಡಾಕ್ಟರ್‌ಗಳು ಸರಿಯಾಗಿ ಮಾಡದೇ ಹೋದರೆ ಆ ಕೇಸ್ ನಿಲ್ಲುವುದಿಲ್ಲ. ಆದ್ದರಿಂದ ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಮೆಡಿಕಲ್ ಹಾಸ್ಪಿಟಲ್‌ನ ಸೂಪರಿಂಟೆಂಡೆಂಟ್‌ಗಳೇನಿದ್ದಾರೆ, ಅವರಿಗೆ ಮತ್ತು ಪೋಲೀಸ್ ಡಿಪಾರ್ಟ್‌ಮೆಂಟ್‌ನವರ ನಡುವೆ ಸರಿಯಾದ ಕೋ-ಆರ್ಡಿನೇಷನ್ ಇಲ್ಲ. ಬೆಂಗಳೂರಿನಲ್ಲಿ ಪ್ರತಿನಿತ್ಯವೂ ಕೂಡ ಆಕ್ಸಿಡೆಂಟ್‌ಗಳು ಹೆಚ್ಚು ಆಗುತ್ತಾ ಇವೆ. ಮರ್ಡರ್‌ಗಳು ಕೂಡ ಜಾಸ್ತಿಯಾಗುತ್ತಾ ಇವೆ. ಇದನ್ನು ಲಕ್ಷಿಸಿ ತಾವುಗಳು ಈ ಕುರಿತು ಒಮ್ಮೆ ರಿವ್ಯೂ ಮಾಡಬೇಕು. ಆದೇ ರೀತಿಯಲ್ಲಿ ಮೆಡಿಕಲ್ ಸೂಪರಿಂಟೆಂಡೆಂಟ್‌ಗಳಿಗೆ ಹೆಚ್ಚಿಗೆ ಪವರ್ಸ್ ಕೊಟ್ಟರೆ ಈ ಕುರಿತ ಕೆಲಸಕಾರ್ಯಗಳು ಹೆಚ್ಚು ಕ್ಷಿಪ್ರವಾಗುತ್ತವೆ. ಒಟ್ಟಿನಲ್ಲಿ ಫೊರೆನ್ಸಿಕ್ ಡಿಪಾರ್ಟ್‌ಮೆಂಟ್ ಬಲಯುತವಾಗಬೇಕು. ಇದು ಸಾಧ್ಯವೇ ಎಂಬುದನ್ನು ತಾವುಗಳು ದಯಮಾಡಿ ತಿಳಿಸಬೇಕೆಂದು ನನ್ನ ವಿಜ್ಞಾಪನೆಗಳು.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೇ, ಈ ಗಂಭೀರ ಸ್ವರೂಪದ ಪ್ರಶ್ನೆಯು ನಮ್ಮ ವ್ಯವಸ್ಥೆಯ ಮೇಲೆ ನಾವೇ ಹಿಡಿಯುತ್ತಾ ಇರತಕ್ಕಂಥ ಒಂದು ಕನ್ನಡಿ. ಹೆಣಗಳನ್ನು ತೆಗೆದುಕೊಂಡು ಮರಣೋತ್ತರ ಪರೀಕ್ಷೆಗೆ ಹೋಗತಕ್ಕಂಥ ಕಾಲದಲ್ಲಿ ಅಲ್ಲಿಯೂ ಈ ಲಂಚದ ಕಾಟ ಹೆಣಗಳನ್ನೂ ಬೆನ್ನು ಹತ್ತಿರತಕ್ಕಂಥಾದ್ದು ಅತ್ಯಂತ ವಿಷಾದನೀಯವಾದಂಥ ಬೆಳವಣಿಗೆ. ಈ ಬೆಳವಣಿಗೆಯನ್ನು ನಾವು ಹಿಮ್ಮೆಟ್ಟಿಸಲು ಜವಾಬ್ದಾರಿಯುತವಾಗಿರತಕ್ಕಂಥ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಸುರೇಶ್‌ಕುಮಾರ್‌ರವರ ಧ್ವನಿಯಲ್ಲಿ ಅರ್ಥವಿದೆ. ಅವರೇ ಸ್ವತಃ ಹೋಗಿ ನೋಡಿ ಬಂದಂಥ ವಿಚಾರವನ್ನು ನಾನು ಪತ್ರಿಕಾ ವರದಿಯಲ್ಲಿ ಕೂಡ ನೋಡಿದ್ದೇನೆ. ಸೂಪರಿಂಟೆಂಡೆಂಟ್‌ರವರ ಮತ್ತು ಪೋಲೀಸ್‌ನವರ ಮಧ್ಯೆ ಕೋ-ಆರ್ಡಿನೇಷನ್ ಇಲ್ಲವೆನ್ನುವುದು ಒಂದು ಮುಖವಾದರೆ, ಮತ್ತೊಂದು ಮುಖ ಈ ಆಸ್ಪತ್ರೆಗಳ ನಿರ್ವಹಣೆಯ ವ್ಯವಸ್ಥೆಯಲ್ಲಿಯೇ

ಕೊಂಚ ಮೂಲಭೂತ ಬದಲಾವಣೆಗಳು, ಸ್ಥಿತ್ಯಂತರಗಳು, ಸುಧಾರಣೆಗಳು, ಆಗಬೇಕಾಗಿರತಕ್ಕಂಥ ಅವಶ್ಯಕತೆಯ ಕಡೆಗೆ ಸರಕಾರದ ಗಮನವನ್ನು ತಾವುಗಳೆಲ್ಲರೂ ಸೆಳೆದಿದ್ದೀರಿ. ಇದಕ್ಕೆ ನಾನು ಆಭಾರಿಯಾಗಿದ್ದೇನೆ. ಇದರ ಬಗ್ಗೆ ಸಂಬಂಧಪಟ್ಟಂಥ ಕಾರ್ಯದರ್ಶಿಯವರಿಂದ ಪೂರ್ಣ ವಿವರಗಳನ್ನು ಹಾಗೂ ಇರುವ ಸ್ಥಿತಿಯನ್ನು ಹೇಗೆ ಉತ್ತಮಪಡಿಸಬೇಕು ಎನ್ನುವ ಬಗ್ಗೆ ಅವರಿಂದ ವರದಿ ಬಂದಮೇಲೆ ನಾನು ಸೂಕ್ತವಾದಂಥ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ ಎಂದು ತಿಳಿಸಬಯಸುತ್ತೇನೆ.

ಶ್ರೀ ಎ.ನಾಗರಾಜ್: ಮಾನ್ಯ ಅಧ್ಯಕ್ಷರೇ, ಮರಣೋತ್ತರ ಪರೀಕ್ಷೆಯ ಕುರಿತಾಗಿ ಇರುವ ಕಾನೂನನ್ನು ಸುಮಾರು 50-60 ವರ್ಷಗಳ ಹಿಂದೆ ಮಾಡಿರುತ್ತಾರೆ. ಅದರ ಪ್ರಕಾರ ಸಂಜೆ 5 ಗಂಟೆಯ ನಂತರ ಈ ಪರೀಕ್ಷೆಯನ್ನು ಮಾಡಬಾರದು ಎಂದು ಇದೆ. ಈಗ ವಿಜ್ಞಾನವು ಬಹಳ ಮುಂದುವರಿದಿರುವುದರಿಂದ ಈ ನಿರ್ಬಂಧವನ್ನು ರಿಲ್ಯಾಕ್ಸ್ ಮಾಡಿ ರಾತ್ರಿ 10-11 ಗಂಟೆಯವರೆಗೆ ಈ ಪರೀಕ್ಷೆಯನ್ನು ಮಾಡುವ ವ್ಯವಸ್ಥೆಯನ್ನು ಮಾಡಲು ಸಾಧ್ಯವೇ ಎಂಬುದನ್ನು ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಸದಸ್ಯರ ಸಲಹೆಯು ಸಮಂಜಸವಾಗಿದೆ. ಈಗ ಏನು ಐದು ಗಂಟೆ ಸಂಜೆಯ ಮೇಲೆ ಮರಣೋತ್ತರ ಪರೀಕ್ಷೆಯನ್ನು ಮಾಡಬಾರದೆಂಬ ನಿಬಂಧನೆ ಇದೆ. ಅದನ್ನು ಸಡಿಲಿಸುವ ಬಗ್ಗೆ ನಾನು ಸಂಬಂಧಪಟ್ಟವರ ಜೊತೆಗೆ ವಿಚಾರಿಸುತ್ತೇನೆ.

ಅಧ್ಯಕ್ಷರು: ಇವೊತ್ತಿನ ಚುಕ್ಕೆ ಗುರುತಿನ ಪ್ರಶ್ನೆಗಳ ಪಟ್ಟಿಯಲ್ಲಿ ಇನ್ನೂ ಐದು ಪ್ರಶ್ನೆಗಳು ಉಳಿದಿವೆ. ಅವುಗಳನ್ನು ಮುಂದಿನ ದಿನಗಳಲ್ಲಿ ತೆಗೆದುಕೊಳ್ಳಲಾಗುತ್ತದೆ. ಇವೊತ್ತಿನ ಸಮಯದಲ್ಲಿ ಈಗಾಗಲೇ 15 ನಿಮಿಷಗಳು ಹೆಚ್ಚಿಗೆ ಆಗಿವೆ. 10-40 ಗಂಟೆಗೆ ಪ್ರಾರಂಭವಾದುದು 11-55 ಗಂಟೆಯವರೆಗೂ ಮುಂದುವರಿದಿದೆ. ಉಳಿದಿರುವ ಪ್ರಶ್ನೆಗಳನ್ನು ನಾವು ಲ್ಯಾಪ್ಸ್ ಮಾಡುವುದಿಲ್ಲ ಮುಂದಿನ ದಿನಗಳಲ್ಲಿ ತೆಗೆದುಕೊಳ್ಳುತ್ತೇವೆ. ದಯವಿಟ್ಟು ಸಹಕರಿಸಬೇಕು. ನಿನ್ನೆ 20 ನಿಮಿಷಗಳು ಜಾಸ್ತಿಯಾಗಿವೆ, ಮೊನ್ನೆ 20 ನಿಮಿಷಗಳು ಜಾಸ್ತಿಯಾಗಿವೆ ಹಾಗೂ ಇವೊತ್ತು 15 ನಿಮಿಷಗಳು ನಿಗದಿತ ಸಮಯಕ್ಕಿಂತ ಹೆಚ್ಚು ಆಗಿದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೇ, ಪ್ರಶ್ನೆಗಳಿಗೆ ದಯಮಾಡಿ ಅವಕಾಶ ಮಾಡಿ ಕೊಡಿ. ಇವೊತ್ತಿನ ಪ್ರಶ್ನೆಗಳನ್ನು ಮುಂದೆ ಯಾವಾಗ ತೆಗೆದುಕೊಳ್ಳುತ್ತೀರಿ?

(ಗೊಂದಲ)

ಅಧ್ಯಕ್ಷರು: ಹೀಗೆ ನಿಗದಿತ ಸಮಯಕ್ಕಿಂತ ಜಾಸ್ತಿಯಾಗುವುದನ್ನು ಮುಂದುವರಿಸಲು ಸಾಧ್ಯವಾಗುವುದಿಲ್ಲ. ದಯವಿಟ್ಟು ಸಹಕರಿಸಬೇಕು. ಪ್ರಶ್ನೆಗಳು ಲ್ಯಾಪ್ಸ್ ಆಗದ ಹಾಗೆ ಅವಕಾಶವನ್ನು ಮಾಡಿಕೊಡುತ್ತೇವೆ. ಆದ್ದರಿಂದ ಇವೊತ್ತು ಉಳಿದ ಪ್ರಶ್ನೆಗಳನ್ನು ಮುಂದುವರಿಸಲಾಗುವುದಿಲ್ಲ. ದಯವಿಟ್ಟು ಸಹಕರಿಸಿ. ನಮ್ಮಲ್ಲಿ ಕ್ವೆಶ್ಚನ್ ಅವರ್ ಎಂದಿದೆಯೇ ಹೊರತು ಕ್ವೆಶ್ಚನ್ ಅವರ್ಸ್ ಎಂದು ಇಲ್ಲ. ಹಿಂದೆ ಕೂಡ ಇಂಥ ಪ್ರಶ್ನೆಗಳನ್ನು ನಾವು ಲ್ಯಾಪ್ಸ್ ಮಾಡಿಲ್ಲ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಯಾವ ದಿನಾಂಕದಂದು ಮುಂದಕ್ಕೆ ಹಾಕಿದ ಪ್ರಶ್ನೆಗಳನ್ನು ತೆಗೆದುಕೊಳ್ಳುತ್ತೀರಿ ಎಂದು ಪ್ರಶ್ನಿಸುವುದು ಸೌಜನ್ಯವಲ್ಲ. ಮಾನ್ಯ ಅಧ್ಯಕ್ಷರು ಆ ಸ್ಥಾನದಿಂದ ಭರವಸೆಯನ್ನು ಕೊಡುತ್ತಾ ಇದ್ದಾರೆ. ಮುಂದಿನ ದಿನಗಳಲ್ಲಿ ಈ ಪ್ರಶ್ನೆಗಳನ್ನು ಹಾಕುತ್ತೇವೆ, ಯಾವ ಪ್ರಶ್ನೆಗಳೂ ಲ್ಯಾಪ್ಸ್ ಆಗುವುದಿಲ್ಲ ಎಂದು ಭರವಸೆ ಕೊಟ್ಟರುವುದು ನಾವು ಕಾದು ನೋಡಬೇಕಾಗುತ್ತದೆ.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು:

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹಸಚಿವರು): ಮಾನ್ಯ ಅಧ್ಯಕ್ಷರೇ, ಹದಿನಾಲ್ಕನೇ ಪಟ್ಟಿಯಲ್ಲಿನ ಲಿಖಿತ ಮೂಲಕ ಉತ್ತರಿಸುವ 155 ಪ್ರಶ್ನೆಗಳ ಪೈಕಿ 115 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

ಪದವಿ ಕಾಲೇಜುಗಳಿಂದ ಪದವಿ ಪೂರ್ವ ಶಿಕ್ಷಣವನ್ನು ಬೇರ್ಪಡಿಸಿರುವುದು.

1764(2292)

ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ಪಿಯುಸಿ ಶಿಕ್ಷಣವನ್ನು ಪದವಿ ಕಾಲೇಜುಗಳಿಂದ ಬೇರ್ಪಡಿಸಲಾಗಿದೆಯೇ;

2) ಬೇರ್ಪಡೆಯಾಗಿರುವುದರಿಂದ ಸಾಕಷ್ಟು ಸಂಖ್ಯೆಯಲ್ಲಿ ಕಿರಿಯ ಕಾಲೇಜುಗಳು ಇಲ್ಲದೇ ಇರುವುದರಿಂದ ವಿದ್ಯಾರ್ಥಿಗಳಿಗೆ ಪ್ರವೇಶಕ್ಕೆ ಅನಾನುಕೂಲತೆಯುಂಟಾಗಿ ತೊಂದರೆಯಾಗಿರುವುದನ್ನು ನಿವಾರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;